ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧ Volume 161	ಬೆಂಗಳೂರು, ಬುಧವಾರ, ೧೪, ಜನವರಿ, ೨೦೨೬(ಪುಷ್ಯ, ೨೪, ಶಕವರ್ಷ, ೧೯೪೭) BENGALURU, WEDNESDAY, 14, JANUARY, 2026(PUSHYA , 24, SHAKAVARSHA, 1947)	ಸಂಚಿಕೆ ೧೦ Issue 10

ಭಾಗ ೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಬೆಂಗಳೂರು ನಗರ ಜಿಲ್ಲೆ, ಕೆ.ಜಿ ರಸ್ತೆ, ಬೆಂಗಳೂರು.

ದೂರವಾಣಿ ಸಂಖ್ಯೆ:080-22211292, ಫ್ಯಾಕ್ಸ್ ಸಂಖ್ಯೆ:080-2221 ಮಿಂಚಂಚೆ::deo.bangaloreu@gmail.com

ಸಂಖ್ಯೆ: ಬೆಂನಜಿ/ಜಿಕಾ/ಕ್ರ.ಸು.ವ/ಅಧಿಸೂಚನೆ/2025-26/8180 ದಿನಾಂಕ:14.01.2026

:: ಅಧಿಸೂಚನೆ ::

ವಿಷಯ: ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ 2013 (ತಿದ್ದುಪಡಿ)ರಂತೆ ಬೆಂಗಳೂರು ನಗರ ಜಿಲ್ಲೆಯ ಕಲ್ಲುಪುಡಿ ಘಟಕಗಳಿಗೆ ಸುರಕ್ಷಿತ ವಲಯಗಳನ್ನು ಘೋಷಣೆ ಮಾಡುವ ಬಗ್ಗೆ .

ಉಲ್ಲೇಖ:1. ಕರ್ನಾಟಕ ಕಲ್ಲುಪುಡಿ ಘಟಕಗಳ ನಿಯಂತ್ರಣ (ತಿದ್ದುಪುಡಿ) ಅಧಿನಿಯಮ, 2013 ರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 56 ಶಾಸನ, 2013 ಬೆಂಗಳೂರು ದಿನಾಂಕ: 26.12.2013.

2. ಕರ್ನಾಟಕ ಕಲ್ಲುಪುಡಿ ಘಟಕಗಳ ನಿಯಂತ್ರಣ (ತಿದ್ದುಪಡಿ) ನಿಯಮಾವಳಿ, 2014 ರ ಅಧಿಸೂಚನೆ ಸಂಖ್ಯೆ: ಸಿಐ 20 ಎಂಎಂಎನ್ 2014 ಬೆಂಗಳೂರು, ದಿನಾಂಕ: 06.02.2014.

3. ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ಅಧಿನಿಯಮ 2020 ದಿನಾಂಕ: 30.03.2020.

4. ಬೆಂಗಳೂರು ನಗರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್ ನೀಡಿಕೆ ಹಾಗೂ ನಿಯಂತ್ರಣ ಪ್ರಾಧಿಕಾರ ಸಭೆಯ ನಡವಳಿ ದಿನಾಂಕ:18.11.2025.

****

ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ ತಿದ್ದುಪಡಿ 2013 ರ ಕಲಂ 3(1)ರಂತೆ ನಮೂನೆ 'ಎ' ಮತ್ತು 'ಎ1' ರಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದು, ನಿಯಮ 6(3) ರಂತೆ ಕಂದಾಯ, ಅರಣ್ಯ, ಪರಿಸರ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಗಳಿಂದ ಜಂಟಿ ಸ್ಥಳ ತಪಾಸಣೆಯನ್ನು ಮಾಡಿ, ನಿಯಮ 6(1) ರಂತೆ ಸುರಕ್ಷಿತ ವಲಯದ ಷರತ್ತುಗಳ ಪೂರೈಕೆಯಾಗಿರುವುದರಿಂದ

ಹಾಗೂ ಉಲ್ಲೇಖ (4)ರ ಬೆಂಗಳೂರು ನಗರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್ ನೀಡಿಕೆ ಹಾಗೂ ನಿಯಂತ್ರಣ ಪ್ರಾಧಿಕಾರ ಸಭೆಯ ನಡವಳಿಯಂತೆ ಈ ಕೆಳಗೆ ನಮೂದಿಸಿರುವ ಬೆಂಗಳೂರು ನಗರ ಜಿಲ್ಲೆಯಲ್ಲಿನ ಕಲ್ಲುಪುಡಿ ಘಟಕಗಳ ಸ್ಥಾಪನೆಗೆ ಸಲ್ಲಿಸಿರುವ ಅರ್ಜಿಗಳಿಗೆ ಸುರಕ್ಷಿತ ವಲಯಗಳನ್ನು ಗುರುತಿಸಿದ್ದು, ಕಲ್ಲು ಪುಡಿ ಮಾಡುವ ಘಟಕಗಳನ್ನು ಸ್ಥಾಪಿಸುವ ಕುರಿತು ಸಭೆಯ ಅನುಮೋದನೆಯಂತೆ ಅಧಿಸೂಚನೆ ಹೊರಡಿಸುವ ನಿಟ್ಟಿನಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ತಿದ್ದುಪಡಿ ಅಧಿನಿಯಮ 2013 ರನ್ವಯ ಕಲ್ಲುಪುಡಿ ಮಾಡುವ ಘಟಕಗಳನ್ನು ಸ್ಥಾಪಿಸಲು ಕಲಂ (6) ರಂತೆ ಈ ಕೆಳಕಂಡ ಪ್ರದೇಶಗಳನ್ನು ಸುರಕ್ಷಿತ ವಲಯಗಳೆಂದು ಈ ಮೂಲಕ ಘೋಷಿಸಲಾಗಿದೆ.

ಕ್ರ. ಸಂ.	ಕಲ್ಲುಪುಡು ಘಟಕ/ ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಗ್ರಾಮ	ಸರ್ವೆ ನಂ.	ವಿಸ್ತೀರ್ಣ (ಎಕರೆ/ ಗುಂಟೆ)	ಜಮೀನಿನ ವರ್ಗೀಕರಣ	ಪ್ರಸ್ತಾಪಿತ ಸುರಕ್ಷಿತ ವಲಯಗಳ ಜಿಪಿಎಸ್ ನಿರ್ದೇಶಾಂಕಗಳು		
1	ಮೆ|| ಕೃತಿಕಾ ಬ್ಲೂ ಮೆಟಲ್ಸ್ (ಯುನಿಟ್-2). ನಂ.51 & 52, 4ನೇ ಮಹಡಿ, ಎಸ್.ವಿ ಪ್ಲಾಸ, 8ನೇ ಮೈನ್, KSRTC ಲೇಔಟ್,, 2ನೇ ಹಂತ, ಜೆ.ಪಿ. ನಗರ, ಬೆಂಗಳೂರು-78	ಬೆಂಗಳೂರು ದಕ್ಷಿಣ	ಕೋಲೂರು	61	2-00	ಸರ್ಕಾರಿ	ಬಿಂದು	ಅಕ್ಷಾಂಶ	ರೇಖಾಂಶ
							ಎ	N12⁰ 53' 05.58"	E77⁰ 23' 42.84"
							ಬಿ	N12⁰ 53' 01.86"	E77⁰ 23' 45.36"
							ಸಿ	N12⁰ 53' 01.26"	E77⁰ 23' 42.84"
							ಡಿ	N12⁰ 53' 05.16"	E77⁰ 23' 41.34"
							ಪರಾಮರ್ಶನ ದತ್ತಾಂಶ ರೇಖೆ-ಡಬ್ಲ್ಯೂ.ಜಿ.ಎಸ್-84		
2	ಮೆ|| ಶ್ರೀ ಲಕ್ಷ್ಮೀ ವೆಂಕಟೇಶ್ವರ ಕಂಬೈನ್ಸ್. ನಂ.36, 6ನೇ ಕ್ರಾಸ್, 30ನೇ ಮೈನ್, ಕೆ.ಎಸ್. ನಾಯ್ಡು ಮುಖ್ಯ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು-85	ಆನೇಕಲ್	ತಮ್ಮನಾಯಕನ ಹಳ್ಳಿ	177	1-29	ಸರ್ಕಾರಿ	ಬಿಂದು	ಅಕ್ಷಾಂಶ	ರೇಖಾಂಶ
							ಎ	N12⁰ 41'20.0453"	E77⁰ 39'11.8488"
							ಬಿ	N12⁰ 41'16.5573"	E77⁰ 39'11.8592"
							ಸಿ	N12⁰ 41'16.5084"	E77⁰ 39'11.3779"
							ಡಿ	N12⁰ 41'15.8682"	E77⁰ 39'11.4253"
							ಇ	N12⁰ 41'15.7217"	E77⁰ 39'10.5166"
							ಎಫ್	N12⁰ 41'20.8146"	E77⁰ 39'9.7215"
							ಜಿ	N12⁰ 41'20.9486"	E77⁰ 39'10.6497"
							ಹೆಚ್	N12⁰ 41'19.9637"	E77⁰ 39'10.8116"
							ಪರಾಮರ್ಶನ ದತ್ತಾಂಶ ರೇಖೆ-ಡಬ್ಲ್ಯೂ.ಜಿ.ಎಸ್-84		
3	ಶ್ರೀ ಸಂತೋಷ್ ಕುಮಾರ್ ಎಂ. ನಂ.17, ಬನ್ನೇರುಘಟ್ಟ ರಸ್ತೆ, ಕೆಂಬತ್ತಹಳ್ಳಿ, ಗೊಟ್ಟಿಗೆರೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು-83	ಆನೇಕಲ್	ತಮ್ಮನಾಯಕನ ಹಳ್ಳಿ	23	2-00	ಸರ್ಕಾರಿ	ಬಿಂದು	ಅಕ್ಷಾಂಶ	ರೇಖಾಂಶ
							ಎ	N12⁰ 41.211'	E77⁰ 39.016'
							ಬಿ	N12⁰ 41.182'	E77⁰ 39.012'
							ಸಿ	N12⁰ 41.180'	E77⁰ 38.957'
							ಡಿ	N12⁰ 41.235'	E77⁰ 38.952'
							ಪರಾಮರ್ಶನ ದತ್ತಾಂಶ ರೇಖೆ-ಡಬ್ಲ್ಯೂ.ಜಿ.ಎಸ್-84		

4	ಮೆ|| ಚೌಡೇಶ್ವರಿ ಸ್ಟೋನ್ ಕ್ರಷರ್. ಪ್ರೊಪ್ರೈಟರ್: ಎನ್ ರಮೇಶ್, ಸಿಡೀ ಹೊಸಕೋಟೆ, ಬೆಂಗಳೂರು-106	ಆನೇಕಲ್	ತಮ್ಮನಾಯಕನ ಹಳ್ಳಿ	23	1-10	ಸರ್ಕಾರಿ	ಬಿಂದು	ಅಕ್ಷಾಂಶ	ರೇಖಾಂಶ
							ಎ	N12⁰41.471'	E77⁰39.015'
							ಬಿ	N12⁰41.438'	E77⁰39.007'
							ಸಿ	N12⁰41.441'	E77⁰38.968'
							ಡಿ	N12⁰41.481'	E77⁰38.972'
							ಪರಾಮರ್ಶನ ದತ್ತಾಂಶ ರೇಖೆ-ಡಬ್ಲ್ಯೂ.ಜಿ.ಎಸ್-84		
5	ಮೆ|| ಸುಮುಖ ಮೈನ್ಸ್ ಅಂಡ್ ಮಿನರಲ್ಸ್. ನಂ.72, 4ನೇ ಮಹಡಿ, ಟಿ.ಎಸ್.ಎನ್ ಆರ್ಕೇಡ್, 28ನೇ ಮುಖ್ಯ ರಸ್ತೆ, ಕರ್ನಾಟಕ ಬ್ಯಾಂಕ್ ಹತ್ತಿರ, 9ನೇ ಬ್ಲಾಕ್, ಜಯನಗರ, ಬೆಂಗಳೂರು-69	ಆನೇಕಲ್	ತಮ್ಮನಾಯಕನ ಹಳ್ಳಿ	23	2-00	ಸರ್ಕಾರಿ	ಬಿಂದು	ಅಕ್ಷಾಂಶ	ರೇಖಾಂಶ
							ಎ	N12⁰41.735'	E77⁰39.023'
							ಬಿ	N12⁰41.692'	E77⁰39.020'
							ಸಿ	N12⁰41.696'	E77⁰38.992'
							ಡಿ	N12⁰41.664'	E77⁰38.993'
							ಇ	N12⁰41.663'	E77⁰38.969'
							ಎಫ್	N12⁰41.734'	E77⁰38.980'
							ಪರಾಮರ್ಶನ ದತ್ತಾಂಶ ರೇಖೆ-ಡಬ್ಲ್ಯೂ.ಜಿ.ಎಸ್-84		

ಈ ಅಧಿಸೂಚನೆಯು ಅಸ್ತಿತ್ವದಲ್ಲಿರುವ ಕಂದಾಯ, ಅರಣ್ಯ, ಪರಿಸರ ಹಾಗೂ ಕರ್ನಾಟಕ ಕಲ್ಲುಪುಡಿ ಘಟಕಗಳ ಲೈಸೆನ್ಸಿಂಗ್ ಹಾಗೂ ನಿಯಂತ್ರಣ ಕಾಯ್ದೆ ಮತ್ತು ನಿಯಮಾವಳಿಗಳ ಅನುಪಾಲನೆ ಕೈಗೊಳ್ಳುವ ಷರತ್ತಿಗೆ ಒಳಪಟ್ಟಿರುತ್ತದೆ.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್
ಮತ್ತು ನಿಯಂತ್ರಣ ಪ್ರಾಧಿಕಾರ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

PR-41

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 4 ವೆಚ್ಚ-12/2026
(ಇ-ಆಫೀಸ್ ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:03.01.2026

ಅಧಿಸೂಚನೆ

2025-26ನೇ ಆರ್ಥಿಕ ವರ್ಷದಲ್ಲಿ ವೆನ್ಲಾಕ್ ಜಿಲ್ಲಾಸ್ಪತ್ರೆ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ, ಜಿಲ್ಲಾ ಆಸ್ಪತ್ರೆ, ಧಾರವಾಡ & ಬೆಂಗಳೂರು ನಗರ & ಗ್ರಾಮಾಂತರ ಜಿಲ್ಲೆಗಳಲ್ಲಿರುವ ಯಲಹಂಕ ಸಾರ್ವಜನಿಕ ಆಸ್ಪತ್ರೆ, ಕೆ.ಆರ್.ಪುರ ಸಾರ್ವಜನಿಕ ಆಸ್ಪತ್ರೆ, ನೆಲಮಂಗಲ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಪಥ್ಯಾಹಾರವನ್ನು ಇಸ್ಕಾನ್ ಸಂಸ್ಥೆಯಿಂದ ರೂ.2,83,47,000/-ಗಳ ವೆಚ್ಚದಲ್ಲಿ ಸಂಗ್ರಹಣೆ ಮಾಡಿಕೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-42

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 1006 ವೆಚ್ಚ-12/2025
(ಇ-ಆಫೀಸ್ ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:03.01.2026

ಅಧಿಸೂಚನೆ

ಶ್ರೀ ಅಬ್ದುಲ್ ಖದೀರ್, ಸರ್ಕಾರದ ವಿಶೇಷ ಕಾರ್ಯದರ್ಶಿ (ನಿವೃತ್ತ) ಮತ್ತು ಶ್ರೀ ದೇವರಾಜು, ಸರ್ಕಾರದ ಉಪ ಕಾರ್ಯದರ್ಶಿ (ನಿವೃತ್ತ) ಇವರುಗಳಿಗೆ ಮಾಸಿಕ ರೂ.80,000/-ಗಳ [ರೀಟೇನಿಂಗ್ ಫೀ ರೂ.40,000/-, ವಾಹನ ಭತ್ಯೆ ರೂ.20,000/- ಹಾಗೂ ಸಿಟ್ಟಿಂಗ್ ಫೀ ರೂ.20,000/-ಗಳ] ಸಮಾಲೋಚನಾ ಶುಲ್ಕದೊಂದಿಗೆ ಹಾಗು ಶ್ರೀಮತಿ ಜಿ.ಎನ್.ಕಸ್ತೂರಿ, ಬೆರಳಚ್ಚುಗಾರರ ಇವರಿಗೆ ಮಾಸಿಕ ರೂ.30,000/-ಗಳ ಸಮಾಲೋಚನ ಶುಲ್ಕದೊಂದಿಗೆ ದಿನಾಂಕ:30.01.2026ರಿಂದ ಒಂದು ವರ್ಷದ ಅವಧಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)ಯಲ್ಲಿ ಸಮಾಲೋಚಕರನ್ನಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-43

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 1072 ವೆಚ್ಚ-12/2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:03.01.2026

ಅಧಿಸೂಚನೆ

ಕಾರ್ಮಿಕರ ರಾಜ್ಯ ವಿಮಾ ಇಲಾಖೆಗೆ ಅಗತ್ಯವಿರುವ ಔಷಧಿಗಳನ್ನು ಕೇಂದ್ರೀಯ ವಿಮಾ ESI ದರಗುತ್ತಿಗೆಯಲ್ಲಿನ ದರಗಳನ್ವಯ ಒಂದು ವರ್ಷದ ಅವಧಿಗೆ ಸಂಗ್ರಹಣೆ ಮಾಡಿಕೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಕಾರ್ಮಿಕ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು, ಕಾರ್ಮಿಕ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-44

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH